ಆ) ಈ ಶಾಲೆಯಲ್ಲಿ 8 ಆರ್.ಸಿ.ಸಿ.ಕೋಣೆಗಳಿವೆ. 4 ತಾತ್ಕಾಲಿಕ ಷೆಡ್ಡುಗಳು ಇರುತ್ತವೆ. ಅದರಲ್ಲಿ ಮುಖ್ಯೋಪಾದ್ಯಾಯರ ಕೋಣೆ–1, ಗಣಕಯಂತ್ರ ಕೋಣೆ–1 ವರ್ಗ ಕೋಣೆಗಳು–10 ಇರುತ್ತವೆ.

ಇ) ಶಾಲೆಗೆ ಒಟ್ಟು 22 ಬೋಧಕ ಸಿಬ್ಬಂದಿಗಳನ್ನು ಮಂಜೂರು ಮಾಡಲಾಗಿದೆ. ಯಾವುದೇ ಹುದ್ದೆಗಳು ಖಾಲಿ ಇರುವುದಿಲ್ಲ. ಹೆಚ್ಚುವರಿ ಶಿಕ್ಷಕರ ಅವಶ್ಯಕತೆ ಇರುವುದಿಲ್ಲ.

ಈ) ರಾಜ್ಯಯ ವಲಯ ಯೋಜನೆಯಡಿ 3 ಹೆಚ್ಚುವರಿ ಕೋಣೆಯನ್ನು ಒದಗಿಸಿದ್ದು, ಇದಕ್ಕಾಗಿ 2009–10ನೇ ಸಾಲಿಗೆ 9.89 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ. ಹೆಚ್ಚುವರಿ ಬೋಧಕ ಸಿಬ್ಬಂದಿಯನ್ನು ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ಉ) ಉದ್ಭವಿಸುವುದಿಲ್ಲ.

**ಮೈಸೂರು ವಿಶ್ವವಿದ್ಯಾನಿಲಯದ ಅವ್ಯವಹಾರ**

**737 (1331) ಡಾ: ಮಹದೇವಪ್ಪ ಹೆಚ್.ಸಿ. (ಟಿ.ನರಸೀಪುರ) :** ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರೊ. ಜೆ. ಶಶಿಧರ್ ಪ್ರಸಾದ್‌ರವರು ಕುಲಪತಿಯಾಗಿದ್ದ ಅವಧಿಯಲ್ಲಿ (2006–07) ನಡೆದಿರುವ ಭ್ರಷ್ಟಾಚಾರ ಹಾಗೂ ಹಗರಣಗಳ ಬಗ್ಗೆ ಕರ್ನಾಟಕ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿಗಳ ನೇತೃತ್ವದ ಏಕ ಸದಸ್ಯ ಆಯೋಗ ಅಕ್ಟೋಬರ್ 2009ರಲ್ಲಿ ಘನವೆತ್ತ ರಾಜ್ಯಪಾಲರಿಗೆ ಹಾಗೂ ಸರ್ಕಾರಕ್ಕೆ ವರದಿ ಸಲ್ಲಿಸಲಾಗಿದ್ದು, ಸದರಿ ವರದಿಯ ಬಗ್ಗೆ ಸರ್ಕಾರವು ಕೈಗೊಂಡ ಕ್ರಮಗಳ ಬಗ್ಗೆ ಮಾಹಿತಿ ಒದಗಿಸುವುದು;

**ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು) :**

ಅ) ಮೈಸೂರು ವಿಶ್ವವಿದ್ಯಾಲಯದಲ್ಲಿ ಕುಲಪತಿಯಾಗಿದ್ದ ಪ್ರೊ. ಜೆ. ಶಶಿಧರ ಪ್ರಸಾದ್ ಇವರ ಆಧಿಕಾರಾವಧಿಯಲ್ಲಿ ನಡೆದಿದೆ ಎನ್ನಲಾದ ಭ್ರಷ್ಟಾಚಾರ ಹಾಗೂ ಹಗರಣಗಳ ಬಗ್ಗೆ ಕರ್ನಾಟಕ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿ ಶ್ರೀ ಹೆಚ್. ರಂಗವಿಠ್ಠಲಾಚಾರ್‌ರವರ ಏಕ ಸದಸ್ಯ ವಿಚಾರಣಾ ಆಯೋಗವನ್ನು ನೇಮಿಸಲಾಗಿತ್ತು, ಸದರಿ ಆಯೋಗವು

ವಿಚಾರಣೆ ನಡೆಸಿ ವಿಚಾರಣಾ ವರದಿಯನ್ನು ನೀಡಿದ್ದು, ಸದರಿ ವಿಚಾರಣಾ ವರದಿ ಮೇಲೆ ಕ್ರಮಕೈಗೊಳ್ಳುವ ಕುರಿತು ಸರ್ಕಾರದ ಹಂತದಲ್ಲಿ ಗಂಭೀರವಾಗಿ ಪರಿಶೀಲಿಸಲಾಗುತ್ತಿದೆ.

**ಪಶು ಕಲ್ಯಾಣಿಗಳಿಗೆ ಅನುದಾನ ಬಿಡುಗಡೆ**

**738 (1332) ಡಾ: ಮಹದೇವಪ್ಪ. ಹೆಚ್.ಸಿ. (ಟಿ.ನರಸೀಪುರ) :** ಮಾನ್ಯ ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2009–10ನೇ ಸಾಲಿನ ಆಯವ್ಯಯದಲ್ಲಿ ಪಶುಸಂಗೋಪನೆ ಇಲಾಖೆಯ Goshalas at Taluk Levels with Private Partnership Fodder Development, Buffalo Breeding & Research Centre, Mudhol Dog Breeding & Research Center Cattle Buffalo Developent Al Centre, Chilling Plant in Belgaum & Gulbarga Division, Amruth Mahalkaval Assistance for Purchase of Fish Seed, Supply of Fishery Requisite Kits, Fishing Harbour at Mangalore. Ornamental pisciculture establishing aqua paks, Identity Card for Fisherman, Animal Insurance, Tribal Sub Plan, Special Component Plan for SC's (SSS) ಈ ಯೋಜನೆಗಳಿಗೆ ಎಷ್ಟು ಅನುದಾನ ಒದಗಿಸಲಾಗಿದೆ;

ಆ) ಈ ಯೋಜನೆಗೆಗಳಿಗೆ ಬಿಡುಗಡೆಯಾದ ಮೊತ್ತ ಮತ್ತು ವೆಚ್ಚದ ವಿವರ ನೀಡುವುದು;

ಇ) ವೆಚ್ಚ ಮಾಡದೆ ಉಳಿದಿರುವ ಮೊತ್ತವೆಷ್ಟು (ವಿವರ ನೀಡುವುದು);

**ಶ್ರೀ ರೇವೂ ನಾಯಕ್ ಬೆಳಮಗಿ (ಪಶುಸಂಗೋಪನಾ ಸಚಿವರು) :**

ಅ) **ಪಶುಸಂಗೋಪನೆ :** 2009–10 ನೇ ಸಾಲಿನ ಆಯವ್ಯಯದಲ್ಲಿ ಪಶುಸಂಗೋಪನೆ ಇಲಾಖೆಯ ವಿವಿಧ ಕಾರ್ಯಕ್ರಮಗಳಿಗೆ ರೂ. 8185 ಲಕ್ಷಗಳ ಅನುದಾನವನ್ನು ಒದಗಿಸಲಾಗಿದೆ. ವಿವರಗಳನ್ನು ಅನುಬಂಧ–1 ರಲ್ಲಿ ನೀಡಿದೆ.